ದಿಃ **07-02-2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಎ.ಆರ್. ಟಿ. ವಕೀಲರಿಂದಃ**

2 ನೇ ಪ್ರತಿವಾದಿ ಪೂರ್ವ ಪಶ್ಚಿಮ 27 ಅಡಿ ನಮ್ಮ ಜಾಗೆಯನ್ನು ಅತೀ ಕ್ರಮಿಸಿ ಮನೆ ಕಟ್ಟಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವ ಆಸ್ತಿಯನು ನಗರಸಬೆಯಂದ ಅಳತೆ ಮಾಡಿಸಿ ಹದ್ದುಬಸ್ತು ಮಾಡಿಕೂಂಡಿರುವುದಿಲ್ಲ. ಸಾಕ್ಷಿ ಆ ಕುರಿತು ನಗರಸಬೆಗೆ ಅರ್ಜಿ ಸಲ್ಲಿಸಿರುವುದಾಗಿ ನುಡಿಯುತ್ತಾರೆ. 1 ನೇ ಪ್ರತಿವಾದಿ ಯಾವುದೇ ಕಟ್ಟಡ ಪರವಾನಿಗೆ ಇಲ್ಲದೇ ಕಂಪೌಂಡ್ ಗೊಡೆಯನ್ನು ಕಟ್ಟಿಕೂಂಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ನಗರಸಬೆಯಿ ೦ದ ತಮ್ಮ ಆಸ್ತಿಯ ಹದ್ದುಬಸ್ತು ಮಾಡಿಕೂಂಡು ತಮ್ಮ ಆಸ್ತಿಯ ಸುತ್ತ ಆವರಣ ಗೋಡೆ ಕಟ್ಟಿಕೊಂಡಿರುತ್ತಾರೆ ಎಂದರೆ ನನಗೆ ಗೊತಿಲ್ಲ. 1 ನೇ ಪ್ರತಿವಾದಿಯ ಜಾಗೆಯ ಸುತ್ತಾ ಆವರಣ ಗೋಡೆ ಇದೆ . ಸಾಕ್ಷಿ ತಮ್ಮ ಆಕ್ಷೇಪಣೆಯ ಹೊರತಾಗಿಯೂ ಅವರು ಕಂಪೌಂಡ್ ಗೋಡೆ ಕಟ್ಟಿಕೊಂಡಿರುವುದಾಗಿ ನುಡಿಯುತ್ತಾರೆ. ನಿವೆಶನ ನಂ. 131 ರಿಂದ 140 ರ ವರೆಗಿನ ಆಸ್ತಿಗಳ ಕುರಿತು 20 ಅಡಿ ಜಾಗೆಯ ಕುರಿತು ಸುಮಾರು 20 ವರ್ಷಗಳಿಂದ ವಿವಾದ ಇದೆ ಎಂದರೆ ನನಗೆ ಗೊತ್ತಿಲ್ಲ. ಬಸವೇಶ್ವರ ಕಾಲೋನಿಯಲ್ಲಿ ಇರುವ ಆಸ್ತಿಗಳ ಕರಿತು ವಿವಾದ ಇದುದ್ದರಿಂದ ಮಾನ್ಯ ಉಚ್ಚನ್ಯಾಯಾಲಯದ ಆದೇಶದಂತೆ ನಗರಸಬೆಯವರು ಸದರಿ ಕಾಲೋನಿಯನ್ನು ಸರ್ವೇಗೆ ಒಳಪಡಿಸಿ ಹದ್ದುಬಸ್ತು ಮಾಡಿರುತ್ತಾರೆ ಎಂದರೆ ನನಗೆ ಗೋತ್ತಿಲ್ಲ.

ಬಸವೇಶ್ವರ ಕಾಲೋನಿಯ ಪಶ್ಚಿಮ ದಕ್ಕಿಗೆ ಮಸೀದಿ ಇದೆ. ಸದರಿ ಮಸೀದಿ ಮುಂದೆ 30 ಅಡಿ ಅಗಲ ರಸ್ತೆ ಇದೆ ಎಂದರೆ ಸಾಕ್ಷಿ ರಸೆತ ಆದೆ ಆದರೆ ಅದರ ಅಳತೆ ನನಗೆ ಹೇಳಲಾಗುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ರಸ್ತೆಯ ಪೂರ್ವಕ್ಕೆ ಬಸವೇಶ್ವರ ಕಾಲೋನಿ ಇದೆ ಎಂದರೆ ನಿಜ. 1 ನೇ ಪ್ರತಿವಾದಿ ದಾವ ಆಸ್ತಿಯನ್ನ ಅತೀ ಕ್ರಮಣ ಮಾಡಿಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಅತೀ ಕ್ರಮಣ ಮಾಡಿದ್ದು 1 ನೆ ಪ್ರತಿವಾದಿಯ ವಿರುದ್ದ ನಾನು ಸುಳು ದಾವೆ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ**

ಓದಿ ಹೇಳಿ ಸಹಿಪಡೆಯಲಾಗಿದೆ
**ಸಹಿ**/-
2ನೇ ಹೆಚ್ಚುವರಿ ಹಿರಿಯ ಮತ್ತು ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ರಾಯಚೂರು.